ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	426
2	ಸದಸ್ಯರ ಹೆಸರು	:	ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸುವ ದಿನಾಂಕ	:	10-12-2020
4	ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಇತ್ತೀಚೆಗೆ ಬೆಂಗಳೂರು ಹೊಸಗುಡ್ಡದಹಳ್ಳಿಯಲ್ಲಿರುವ ಕೆಮಿಕಲ್ ಕಾರ್ಖಾನೆಯಲ್ಲಿ ಬೆಂಕಿ ಅವಘಡವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸಗುಡ್ಡದಹಳ್ಳಿಯಲ್ಲಿ ನಡೆದ ಬೆಂಕಿ ಅವಘಡದ ಉದ್ದಿಮೆಯು ಕೆಮಿಕಲ್ ಕಾರ್ಖಾನೆಯಾಗಿರುವುದಿಲ್ಲ ಬದಲಿಗೆ ಒಂದು ದಾಸ್ತಾನು ಮಳಿಗೆಯಾಗಿರುತ್ತದೆ. ಬೆಂಕಿ ಅವಘಡ ಸಂಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ವಸತಿ ಪ್ರದೇಶಗಳಲ್ಲಿ ಈ ರೀತಿಯ ಕಾರ್ಖಾನೆಗಳನ್ನು ಸ್ಥಾಪನೆ ಮಾಡಲು ಇರುವ ಮಾನದಂಡಗಳೇನು;	ವಸತಿ ಪ್ರದೇಶದಲ್ಲಿ ಕೆಮಿಕಲ್ / ಯಾವುದೇ ಕಾರ್ಖಾನೆಗಳನ್ನು ನಡೆಸಲು ಅವಕಾಶಗಳಿರುವುದಿಲ್ಲ.
ಇ)	ವಸತಿ ಪ್ರದೇಶದಲ್ಲಿ ಈ ರೀತಿಯ ಅಪಾಯಕಾರಿ ಕೆಮಿಕಲ್ ಕಾರ್ಖಾನೆಗಳನ್ನು ನಡೆಸುತ್ತಿರುವವರ ಬಗ್ಗೆ ಹಾಗೂ ಸಂಬಂಧಪಟ್ಟ ಅಧಿಕಾರಿ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಅವಘಡ ಸಂಭವಿಸಿದ ಉದ್ದಿಮೆಯ ಮಾಲೀಕರು ಮತ್ತು ಇನ್ನಿತರರನ್ನು ಈಗಾಗಲೇ ಸಂಬಂಧಪಟ್ಟ ಪೊಲೀಸ್ ಇಲಾಖೆ ರವರು ಬಂಧಿಸಿರುತ್ತಾರೆ ಹಾಗೂ ಸದರಿ ಅವಘಡಕ್ಕೆ ಸಂಬಂಧಿಸಿದಂತೆ, ಪೊಲೀಸ್ ಇಲಾಖಾ ವತಿಯಿಂದ ತನಿಖೆಯು ಪ್ರಗತಿಯಲ್ಲಿರುತ್ತದೆ.
ಈ)	ಸದರಿ ಬೆಂಕಿ ಅವಘಡದಲ್ಲಿ ಕಾರ್ಖಾನೆಯ ಅಕ್ಕಪಕ್ಕ ಇರುವ ಸಾರ್ವಜನಿಕ ಸ್ವತ್ತುಗಳಿಗೆ ಆಗಿರುವ ನಷ್ಟಕ್ಕೆ ಸರ್ಕಾರ ಒದಗಿಸಿದ ಪರಿಹಾರವೆಷ್ಟು;	ಪರಿಹಾರಕ್ಕೆ ಸಂಬಂಧಿಸಿದಂತೆ ಕಂದಾಯ ಮತ್ತು ಕಾಮಗಾರಿ ಇಲಾಖೆಗಳ ಸಂಬಂಧಿಸಿದ ಅಧಿಕಾರಿಗಳು ಜಂಟಿ ಸ್ಥಳ ಪರಿಶೀಲನೆ ನಡೆಸಿದ್ದು, ಕಾರ್ಖಾನೆಯ ಅಕ್ಕಪಕ್ಕದ 10 ಮನೆಗಳಿಗೆ ಹಾನಿಯಾಗಿದ್ದು, ಸದರಿ ಮನೆಗಳ ದುರಸ್ಥಿ ಸಂಬಂಧ ಪರಿಹಾರ ನೀಡಲು ರೂ. 55.57 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಪರಿಹಾರ ನೀಡಲು ಕ್ರಮವಹಿಸಲಾಗುತ್ತಿರುತ್ತದೆ.
ಉ)	ಇತ್ತೀಚೆಗೆ ಬೆಂಗಳೂರು ಹೊಸಗುಡ್ಡದ ಹಳ್ಳಿಯಲ್ಲಿರುವ ಕೆಮಿಕಲ್ ಕಾರ್ಖಾನೆಯಲ್ಲಿ ಆಗಿರುವ ಬೆಂಕಿ ಅವಘಡದ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು?	ಬೆಂಗಳೂರು ನಗರದ ವಿಜಯನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ : 134 ಬಾಪೂಜಿನಗರ ವಾರ್ಡಿನ ಹೊಸಗುಡ್ಡದಹಳ್ಳಿ, ಕುವೆಂಪುನಗರ, 1ನೇ ಮುಖ್ಯ ರಸ್ತೆಯ 'ಎ' ಸ್ಟ್ರೀಟ್‌ನಲ್ಲಿ ಮೆ॥ ರೇಖಾ ಕೆಮಿಕಲ್ಸ್ ಎಂಬ ಹೆಸರಿನಲ್ಲಿ ಶ್ರೀ ಸಜ್ಜನ್ ರಾಜ್ ಎಂಬುವವರು ಅನಧಿಕೃವಾಗಿ ನಡೆಸುತ್ತಿದ್ದ

...2.

		ರಾಸಾಯನಿಕ ವಸ್ತುಗಳ ದಾಸ್ತಾನು ಮಳಿಗೆಯಲ್ಲಿ ದಿನಾಂಕ: 10.11.2020 ರಂದು ಬೆಳಿಗ್ಗೆ 10.30ರ ಸಮಯದಲ್ಲಿ ರಾಸಾಯನಿಕ ವಸ್ತುಗಳನ್ನು ಬ್ಯಾರಲ್ ನಿಂದ ಬ್ಯಾರಲ್‌ಗೆ ವರ್ಗಾಯಿಸುತ್ತಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಬೆಂಕಿ ಅವಘಡ ಸಂಭವಿಸಿರುತ್ತದೆ. ಸದರಿ ಬೆಂಕಿ ಅವಘಡದಲ್ಲಿ ದಾಸ್ತಾನು ಮಳಿಗೆಯ ಇಬ್ಬರು ಕಾರ್ಮಿಕರಿಗೆ ಸಣ್ಣಪುಟ್ಟ ಸುಟ್ಟಗಾಯಗಳಾಗಿದ್ದು, ಅವರುಗಳು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸದರಿ ಸ್ಥಳಕ್ಕೆ ಮಾನ್ಯ ಗೃಹ ಸಚಿವರು, ಕರ್ನಾಟಕ ಸರ್ಕಾರ ರವರು ಭೇಟಿ ನೀಡಿ ಇಂತಹ ಅವಘಡಗಳು ಯಾವುದೇ ನಗರದ ಯಾವುದೇ ಸ್ಥಳದಲ್ಲಿ ನಡೆಯದಂತೆ ಅಗತ್ಯ ಕ್ರಮವಹಿಸಲು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿ, ಪೋಲೀಸ್ ಇಲಾಖಾ ವತಿಯಿಂದ ಠಾಣಾವಾರು ವಸತಿ ಪ್ರದೇಶಗಳಲ್ಲಿರುವ ದಾಸ್ತಾನು ಮಳಿಗೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವಂತೆ ಪೋಲೀಸ್ ಆಯುಕ್ತರವರಿಗೆ ಸೂಚಿಸಿರುತ್ತಾರೆ. ದಿನಾಂಕ: 11-11-2020 ರಂದು ಬೆಳಿಗ್ಗೆ ಅವಘಡದ ಸ್ಥಳಕ್ಕೆ ಮಾನ್ಯ ಆರೋಗ್ಯ ಸಚಿವರು ಕರ್ನಾಟಕ ಸರ್ಕಾರ ರವರು ಭೇಟಿ ನೀಡಿ ಈ ರೀತಿಯ ದಾಸ್ತಾನು ಮಳಿಗೆಗಳನ್ನು ಕೂಡಲೇ ಗುರುತಿಸಿ ಕೈಗಾರಿಕಾ ಪ್ರದೇಶಗಳಿಗೆ ಸ್ಥಳಾಂತರಿಸುವ ಸಂಬಂಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ. ಪಾಲಿಕೆ ವತಿಯಿಂದ ಸದರಿ ಅನಧಿಕೃತ ದಾಸ್ತಾನು ಮಳಿಗೆಯ ಮಾಲೀಕರಾದ ಶ್ರೀ ಸಜ್ಜನ್ ರಾಜ್ ಮತ್ತು ಇತರರ ವಿರುದ್ಧ ಪ್ರಥಮ ವರ್ತಮಾನ ಮಾಹಿತಿಯನ್ನು (FIR) ದಾಖಲಿಸುವಂತೆ ಸ್ಥಳೀಯ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.

ನಅಇ 387 ಎಂಎನ್‌ಯು 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ